**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ**

**ಎಸ್.ಸಿ ಸಂಖ್ಯೆ 68/2022**

ಫ್ರಾಸಾಃ8

ಚಾಸಾಃ10

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರಸನ್ನ ಕುಮಾರ್ |
| ತಂದೆಯ ಹೆಸರು | : | ಡಿ.ಟಿ.ರಾಜು |
| ವಯಸ್ಸು | : | 48 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸ | : | ಕೊಡ್ಲಿಪೇಟೆ |

ಸಾಕ್ಷಿಯನ್ನು ದಿನಾಂಕ **12-06-2024** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಮೃತ ಹಾಲೇಶರವರ ಪರಿಚಯ ಇದೆ. ಹಾಲೇಶ್ ರವರನ್ನು ಆರೋಪಿಗಳು ದೊಣ್ಣೆಯಲ್ಲಿ ಹೊಡೆದು ದಿನಾಂಕ 22-04-2022 ರಂದು ಕೊಲೆ ಮಾಡಿದ್ದರು. ಅವರ ಮೃತದೇಹವನ್ನು ಮಡಿಕೇರಿಯ ಜಿಲ್ಲಾ ಆಸ್ಪತ್ರೆಯ ಶವಗಾರದಲ್ಲಿ ಇರಿಸಲಾಗಿತ್ತು.

ದಿನಾಂಕ 23-04-2022 ರ ಬೆಳಿಗ್ಗೆ 9.00 ಗಂಟೆಗೆ ನಾನು ಹಾಲೇಶ್ ರವರ ಮೃತದೇಹವನ್ನು ಜಿಲ್ಲಾ ಆಸ್ಪತ್ರೆಯ ಶವಗಾರದಲ್ಲಿ ನೋಡಿದ್ದೇನೆ. ಪೊಲೀಸರು ಅವರ ಬಟ್ಟೆಗಳನ್ನು ಬಿಚ್ಚಿ ನಮಗೆ ತೋರಿಸಿದಾಗ ಅವರ ದೇಹದ ಎರಡು ಕೈ ಹಾಗೂ ಕಾಲುಗಳಲ್ಲಿ ಮತ್ತು ಬೆನ್ನಿನಲ್ಲಿ ದೊಣ್ಣೆಯಿಂದ ಹೊಡೆದ ಗಾಯಗಳು ಇದ್ದವು. ಮೃತ ದೇಹದ ಮೂಗಿನಿಂದ ರಕ್ತ ಬಂದ ರೀತಿಯಲ್ಲಿ ಕಾಣುತ್ತಿತ್ತು. ಅದೇ ರೀತಿ ಬಾಯಿಯಿಂದ ಜೊಲ್ಲು ಸುರಿದ ರೀತಿಯಲ್ಲಿ ಇತ್ತು. ಪೊಲೀಸರು ಮೃತ ದೇಹವನ್ನು ತೋರಿಸಿ ಸದರಿ ಸ್ಥಳದಲ್ಲಿಯೇ ಒಂದು ಬರವಣಿಗೆ ಮಾಡಿ ನನ್ನ ಸಹಿ ತೆಗೆದುಕೊಂಡರು. ಸದರಿ ಬರವಣಿಗೆ ಶವಪಂಚನಾಮೆ ಆಗಿದ್ದು, ಅದನ್ನು ನಿಪಿ-12 ಎಂದು, ಅದರಲ್ಲಿ ಇದ್ದ ಸಾಕ್ಷಿ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ನಿಪಿ12 ರ ಸಂದರ್ಭದಲ್ಲಿ ಪೊಲೀಸರು

ಫೋಟೊಗಳನ್ನು ತೆಗೆದಿದ್ದು, ಸದರಿ 2 ಫೋಟೊಗಳನ್ನು ಒಟ್ಟಾಗಿ ನಿಪಿ-13 ಎಂದು ಗುರುತಿಸಲಾಯಿತು.

**ಪಾಟೀಸವಾಲು- 1 ರಿಂದ 3 ನೇ ಆರೋಪಿತರ ಪರವಾಗಿ ಶ್ರೀ ಬಿ.ಡಿ.ಕೆ. ವಕೀಲರಿಂದಃ**

ನಿಪಿ-12 ರ ದಾಖಲೆಯನ್ನು ನಾನು ಓದಿ ನೋಡಿದ್ದೇನೆ ಅದನ್ನು ಶಶಿ ಎನ್ನುವ ಪೊಲೀಸರು ಬರೆದಿದ್ದಾರೆ. ಮೃತದೇಹದ ಮೇಲೆ ಯಾವುದೇ ಗಾಯಗಳನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ಹಾಲೇಶ್ ರವರ ಮಗ ಈ ದಿನ ನ್ಯಾಯಾಲಯದ ಹೊರಗೆ ಇದ್ದಾನೆ ನಾನು ಅವರ ಜೊತೆ ಬಂದಿಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಪೊಲೀಸರ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ